ಒಂದು ತಕ್ಷಣದ ನಿಲುಗಡೆಗೆ ತಲುಪಿಬಿಡುತ್ತದೆ. ಕವಿ ಪ್ರಕೃತಿಯ ರೊಮ್ಯಾಂಟಿಕ್ ಲೋಕವನ್ನು ಹೇಳುತ್ತಿರುವುದು ಅದರ ಸೊಗಸಿಗಲ್ಲ. ಮುಂದೆ ಇಡಬಹುದಾದ ವಿಷಾದಕ್ಕೆ, ಸಂಕಟಕ್ಕೆ. ಅದಕ್ಕಾಗಿ ಇಲ್ಲಿ 'ನನ್ನೊಡಲು' ಎನ್ನುವುದು ಕೇವಲ ವೈಯಕ್ತಿಕ ನೆಲೆಯದಲ್ಲ. ಅದು ಅಂಥ ಬದುಕಿನ ಎಲ್ಲರ ರೂಪ.

ಇಡೀ ಕವಿತೆ ಪರಸ್ಪರ ವಿರುದ್ಧಮುಖಿಗಳ ಮೂಲಕ ತರತಮದ ನೆಲೆಯನ್ನು ಸೂಕ್ಷ್ಮವಾಗಿ ಕಟ್ಟಿಕೊಡುತ್ತಿದೆ. 'ಮಳೆ' ಲೋಕವನ್ನೇ ತಣಿಸಬಹುದು. ಆದರೆ ಇಲ್ಲಿ 'ಮಳೆ' ತಣಿಸುವ ಗುಣವನ್ನೇ ಕಳೆದುಕೊಂಡು ನಿಸ್ತೇಜವಾಗಿದೆ. ಜಡವಾಗಿದೆ. ಹನಿವ ಗುಣವನ್ನೇ ಕಳೆದುಕೊಂಡು ಬಿಟ್ಟದೆ. ಅದು ಎಲ್ಲಿಗೆ? ಬಡವರ ಒಡಲಿಗೆ. ಬಡವರ ಒಡಲು ಯಾರ ಕರುಣೆಗೂ ಸಿಗದ ಪ್ರಕ್ಷುಬ್ಧ ಕಡಲಷ್ಟೇ.

**ನಿನ್ನ ಹೆಜ್ಜೆಗೆ ಪರ್ವತಗಳು**
**ಪಾಚಿಗಟ್ಟಿದರೂ**
**ಪುಟ್ಟ ಹೊಟ್ಟೆಯ ಉರಿ**
**ಆರುತ್ತಿಲ್ಲ**

ಇದರ ಮುಂದುವರಿಕೆಯಾಗಿ ಮಳೆಯನ್ನು ಮುಖಾಮುಖಿಯಾಗಿ ಮಾತನಾಡಿಸುತ್ತದೆ. ನೀನು ಮತ್ತು ನಾನು, ನನ್ನ ಎಂಬ ಪದಗಳ ಮೂಲಕ ಕವಿ ಇನ್ನಷ್ಟು ಸೂಕ್ಷ್ಮತೆಯ ಕಡೆ ಸೆಳೆಯುತ್ತಾರೆ. ಇಲ್ಲಿ 'ನೀನು' ಎಂಬುದು ಶೋಷಣೆಯ ಎಲ್ಲದರ ರೂಪಕ. 'ನಾನು ನನ್ನ ಮತ್ತು ಪಕ್ಷಿ' ಎಂಬುದು ದಮನಿತ ಲೋಕದ ಶಕ್ತ ಅಭಿವ್ಯಕ್ತಿ. ಇದು ಏಕದಂತೆ ಕೇಳಿಸಿದರೂ ಅನೇಕಗಳ ಗುಚ್ಛ.

ನೀನು ಸುರಿವ ನೀರಿನಿಂದ ಬೆಟ್ಟಗಳು ಪಾಚಿಗಟ್ಟುತ್ತವೆ. ಆದರೆ ಪುಟ್ಟ ಹೊಟ್ಟೆಯೊಳಗಿನ ಉರಿ ಮಾತ್ರ ಆರುತ್ತಿಲ್ಲವೇಕೆ? ಇದು ಕವಿ ಎತ್ತುವ ಎರಡನೇ ಪ್ರಶ್ನೆ. ಆರಂಭದಲ್ಲಿ ಮಳೆಯೊಂದಿಗೆ ಕವಿ ಸಂವಾದಕ್ಕಿಳಿಯುತ್ತಾನೆ. ಈ ಸಂವಾದ ಆರ್ತನಾದದಂತೆ ಇಲ್ಲ. ಕೇಳುವ ಎದೆಗಾರಿಕೆಯ ಅಭಿವ್ಯಕ್ತಿಯಂತೆ ಬೆಳೆಯುತ್ತದೆ. ಲೋಕದ ಉರಿಯನ್ನು ಕೊನೆಗಾಣಿಸುವ ಶಕ್ತಿ ಮಳೆಗಿದೆ; ನೀರಿಗಿದೆ. ನೀರಿಗೆ ಹರಿದು ಹರಿದು ಪಾಚಿಗಟ್ಟಿಸುವ ಗಟ್ಟಿತನವೂ ಇದೆ. ಆದರೆ ಪುಟ್ಟ ಹೊಟ್ಟೆಯೊಳಗಿನ ಉರಿ ಮಾತ್ರ ಆರುತ್ತಿಲ್ಲ. ಆ ಒಡಲಾಗ್ನಿ ಯಾವ ಸ್ವರೂಪದ್ದು? ಮಳೆಯಂಥ ಮಳೆಯಿಂದಲೇ ಒಡಲಾಗ್ನಿಯನ್ನು ಆರಿಸಲು ಸಾಧ್ಯವಾಗಿಲ್ಲ. ಅದು 'ಬಡವರು ಸತ್ತರೆ ಸುಡಲಿಕ್ಕೆ ಸೌದಿಲ್ಲೋ' ಎನ್ನುವ ಜಾನಪದ ಸಂಕಟವನ್ನು ನೆನಪಿಸುತ್ತದೆ.

ಇದು ಪ್ರಾರ್ಥನೆಯಂತೆ ಕೇಳಿಸಿದರೂ ಎನ್ಕೆ ಅವರ ಕವಿತೆಯಲ್ಲಿ ಪ್ರತಿರೋಧದ ಶಕ್ತಿಯಾಗಿ ಬಳಕೆಯಾಗಿದೆ. ಮಳೆಯಿಂದ ಎದೆಯೊಳಗಿನ ಉರಿ ಏರುತ್ತಲೇ ಇದೆ. ಹಾಗಾದರೆ ಆ ಒಡಲ ಉರಿಯನ್ನು ಆರಿಸುವ ಮದ್ದನ್ನು ಎಲ್ಲಿಂದ ಆಯ್ದು ತರಬೇಕು? ಏನನ್ನು ಆಹ್ವಾನಿಸಬೇಕು? ಈ ಲೋಕವನ್ನು ತಣಿಸಲು, ಸಮಸಮಾಜ ಕಟ್ಟಲು ಅನೇಕ ಸುಧಾರಕರು ಬಂದು ಆಗಿಹೋಗಿದ್ದಾರೆ. ಆದರೆ ಅಸ್ಪೃಶ್ಯತೆ ಕೊನೆಯಾಗಿಲ್ಲ. ಅಸ್ಪೃಶ್ಯ ನೋವಿನ ಸಂಕಟಗಳನ್ನೇ ಈ ಸಾಲುಗಳು ಹೇಳುತ್ತಿವೆ.

**ಇಲ್ಲಿ ಪಕ್ಷಿ ಪಾದವನ್ನಿಟ್ಟು**
**ಬೂದಿಯಾಗುವುದು**
**ಬಿದ್ದ ಆಲಿಯ ಕಲ್ಲು ಇದ್ದಿಲಾಗುವುದು**
**ಕುಂತವರೂ ನಿಂತವರೂ**
**ಚಿತೆಯಾಗುವರು**

ಮುಂದಿನ ಸಾಲುಗಳು ಕವಿತೆಗೆ ಇನ್ನೊಂದು ಜಿಗಿತವನ್ನು ನೀಡುತ್ತವೆ. ಉರಿಯ ಪರಿಣಾಮವನ್ನು ಇನ್ನಷ್ಟು ತೀವ್ರವಾಗಿ ಎದುರಾಗುತ್ತವೆ. ಮಳೆಗಿಲ್ಲದ ಸಮೃದ್ಧಿಯ ಗುಣ ಪಕ್ಷಿಯ ಮೂಲಕ ಎದುರಾಗುತ್ತದೆ. ಒಂದು ಪುಟ್ಟ ಪಕ್ಷಿಯ ಪಾದಸ್ಪರ್ಶದಿಂದ ಆಲಿಯ ಕಲ್ಲು ಇದ್ದಿಲಾಗುತ್ತದೆ. ಘನೀಕರಿಸಿದ ನೀರನ್ನು ಇದ್ದಿಲಾಗಿಸುವ ಆ ಪುಟ್ಟ ಪಕ್ಷಿಯ ಪಾದ ಶಾಂತ ರೂಪಿಯಾದುದು. ಅದಲ್ಲದೆ ಪಕ್ಷಿಯ ಪಾದಕ್ಕಿರುವ ಶಕ್ತಿ ಇನ್‌ಕ್ಲೂಸಿವ್ 'ಮಳೆ'ಗೆ ಇಲ್ಲ. ಪಕ್ಷಿ ಪುಟ್ಟದಾದರೂ ಅದರ ಆಕ್ರೋಶ ದೊಡ್ಡದೇ. ಆ ಪುಟ್ಟಜಗತ್ತು ಶ್ರಮಿಕರದ್ದು; ದಮನಿತರದ್ದು. ಯಃಕಶ್ಚಿತ್ ಒಂದು ನೊಣ, ಸಿಂಹವನ್ನು ಸೋಲಿಸಿದಂತೆ, ಎರೆಹುಳ ಗಿಡುಗವನ್ನು ಮಣಿಸಿದಂತೆ, ಕುವೆಂಪು ಅವರ 'ಕಲ್ಕಿ' ಕವಿತೆಯ ಕೊನೆಯಲ್ಲಿ 'ಬಡವನೇ ಕಲಿಯುಗದಂತ್ಯದ ಕಲ್ಕಿ' ಎಂಬಂತೆ ಇಲ್ಲಿ ಪಕ್ಷಿಯೇ ಎಲ್ಲವನ್ನು ಸಮಾನಗೊಳಿಸುವ ರೂಪಕ. ಪಾದ ಪುಟ್ಟದಾದರೂ ಶಕ್ತಿ ಭೂಮಿತೂಕದಷ್ಟು. ಪುಟ್ಟಪಾದವೇ ಇಡೀ ಭೂ ಮಂಡಲವನ್ನು ಬೂದಿಯಾಗಿಸುತ್ತಿದೆ. 'ಪಾದ' ಇಲ್ಲಿ